ದಿಃ 05.02.2026

**ಪ್ರಭಾರ ಪ್ರಧಾನ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಹೊಳಲ್ಕೆರೆ.**

**ಸಿ.ಸಿ.1279/2024**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಸವಿತಾ.ಹೆಚ್ | ಪ್ರಾ.ಸಾಃ 4 |
| ತಂದೆಯ/ಗಂಡನ ಹೆಸರು | : | ದ್ಯಾಮೇಶ್ | ಚಾ.ಸಾಃ 6 |
| ವಯಸ್ಸು | : | 42 ವರ್ಷ | |
| ಕೆಲಸ | : | ಅಬಕಾರಿ ನಿರೀಕ್ಷಕರು, ದಾವಣಗೆರೆ ಉಪ ವಿಭಾಗ. | ಸಾ ಪ್ರ ಬೋ |
| ವಾಸ | : | ದಾವಣಗೆರೆ. | ದಿಃ05.02.2026. |

**ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ**

ನಾನು ದಿ.05.02.2024 ರಿಂದ 10.06.2024 ರವರೆಗೆ ಹೊಳಲ್ಕೆರೆ ವಲಯದ ಅಬಕಾರಿ ನಿರೀಕ್ಷಕರಾಗಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕ 21.03.2024 ಬೆಳಿಗ್ಗೆ 10.50 ರ ಸಮಯದಲ್ಲಿ ನಾನು ನಮ್ಮ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, ನನಗೆ ಬಾತ್ಮಿದಾರರಿಂದ ತಿಮ್ಮಾನಾಯ್ಕ ಬಿನ್ ತೊಳಚನಾಯ್ಕ ರವರು ಆತನಿಗೆ ಸೇರಿದ ಕೆಎ-16-ಸಿ-7951 ರ ಆಟೋದಲ್ಲಿ ಅಕ್ರಮವಾಗಿ ಶಿವಮೊಗ್ಗದಿಂದ ಚಿತ್ರದುರ್ಗಕ್ಕೆ ಹೋಗುವ ಎನ್.ಹೆಚ್-13 ರಸ್ತೆಯಲ್ಲಿ ಅಕ್ರಮವಾಗಿ ಮಧ್ಯ ಮಾರಾಟ ಮಾಡುತ್ತಿದ್ದಾನೆ ಎಂದು ಮಾಹಿತಿ ಬಂದಿರುತ್ತದೆ. ನಾನು ಸದರಿ ಮಾಹಿತಿಯ ಕುರಿತಾಗಿ ಚಾಸಾ-3 ಮತ್ತು ಚಾಸಾ-4 ರವರಿಗೆ ಮಾಹಿತಿಯನ್ನು ನೀಡಿ, ಸದರಿರವರನ್ನು ಠಾಣಾ ಜೀಪಿನಲ್ಲಿ ಹೊಳಲ್ಕೆರೆ ಖಾಸಗಿ ಬಸ್ ನಿಲ್ದಾಣದ ಬಳಿ ಕರೆದುಕೊಂಡು ಹೋಗಿರತ್ತೇನೆ. ಬಸ್ ನಿಲ್ದಾಣದ ಬಳಿ ಇದ್ದ ಚಾಸಾ-1 ಮತ್ತು 2 ರವರಿಗೆ ನಾನು ದಾಳಿ ಮಾಡುವ ಕುರಿತು ಮಾಹಿತಿಯನ್ನು ನೀಡಿ, ನೋಟೀಸ್‌ನ್ನು ನೀಡಿ, ಅವರನ್ನು ಸಹ ಠಾಣಾ ಜೀಪಿನಲ್ಲಿ ಕರೆದುಕೊಂಡು ಎನ್.ಹೆಚ್ -13 ರ ಧರ್ಮಾರ್ಥ ಪಶು ಆಸ್ಪತ್ರೆಯ ಬಳಿ ಇರುವ ರಸ್ತೆಯ ಬಳಿ ಹೋಗಿರುತ್ತೇವೆ. ನಂತರ ಚಾಸಾ-1 ಮತ್ತು 2 ರವರಿಗೆ ಶೋಧನಾ ವಾರೆಂಟ್‌ನ್ನು ತಯಾರಿಸಿಕೊಂಡ ಬಗ್ಗೆ ನೋಟಿಸುಗಳನ್ನು ನೀಡಿ, ಚಾಸಾ-1 ಮತ್ತು 2 ರವರ ಸಹಿಗಳನ್ನು ಪಡೆದುಕೊಂಡಿರುತ್ತಾರೆ. ನಾನು ಚಾಸಾ-1 ರಿಂದ 4 ರವರೊಂದಿಗೆ ನಿಂತು ವಾಹನಗಳನ್ನು ಪರಿಶೀಲನೆ ಮಾಡುತ್ತಿದ್ದಾಗ, ಶಿವಮೊಗ್ಗ ಕಡೆಯಿಂದ ಕೆಎ-16-ಜಿ-0634 ರ ತ್ರಿಚಕ್ರ ಆಟೋ ಬಂದಿದ್ದು, ಸದರಿ ಆಟೋವನ್ನು ಪರಿಶೀಲಿಸಲಾಗಿ ವಾಹನದ ಹಿಂಭಾಗದಲ್ಲಿನ ಸೀಟಿನ ಮೇಲೆ ಸ್ಟಾರ್ ಪಾನ್ ಮಸಾಲ ಬಿಳಿ ಚೀಲ ಇರುವುದು ಕಂಡುಬಂತು. ಸದರಿ ಚೀಲವನ್ನು

ಪರಿಶೀಲಿಸಲಾಗಿ, 90 ಎಂ.ಎಲ್‌ನ 90 ರಾಜಾವಿಸ್ಕಿ ಟೆಟ್ರಾ ಪ್ಯಾಕೆಟ್‌ಗಳು, 90 ಎಂ.ಎಲ್ ನ 96 ಹೈವರ್ಡ್ಸ್ ವಿಸ್ಕಿಯ ಟೇಟ್ರಾ ಪ್ಯಾಕೆಟ್‌ಗಳು, 90 ಎಂ.ಎಲ್.ನ 48 ಒರಿಜನಲ್ ಚಾಯ್ಸ್ ವಿಸ್ಕಿಯ ಟೆಟ್ರಾ ಪ್ಯಾಕೇಟ್‌ಗಳು ಕಂಡುಬಂದಿದ್ದು, ಒಟ್ಟು 21.600 ಲೀಟರ್ ಮಧ್ಯ ಇತ್ತು. ನಂತರ ಸದರಿ ವ್ಯಕ್ತಿಯ ಹೆಸರು ಮತ್ತು ವಿಳಾಸವನ್ನು ತಿಳಿದುಕೊಂಡು, ಆತನ ಬಳಿ ಮಧ್ಯ ಮಾರಾಟ ಮಾಡಲು ಪರವಾನಿಗೆ ಇದೆಯೇ ಎಂದು ಕೇಳಲಾಗಿ ಇಲ್ಲ ಎಂದು ಹೇಳಿರುತ್ತಾರೆ. ನಂತರ ಅಮಾನತ್ತುಪಡಿಸಿಕೊಂಡ ಎಲ್ಲಾ ಮಧ್ಯದ ಪೌಚುಗಳ ಪೈಕಿ ತಲಾ 10 ಪ್ಯಾಕೆಟ್ ಗಳನ್ನು ರಾಸಯನಿಕ ಪರೀಕ್ಷಾ ವರದಿಗಾಗಿ ತೆಗೆದುಕೊಂಡಿರುತ್ತೇವೆ. ನಂತರ ಪಂಚರ ಸಮಕ್ಷಮ ಬೆಳಿಗ್ಗೆ 10.50 ರಿಂದ ಮಧ್ಯಾಹ್ನ 12.00 ಗಂಟೆಯವರೆಗೆ ಮಹಜರಿನ ಕ್ರಮವನ್ನು ಜರುಗಿಸಿ, ಮಧ್ಯದ ಪೌಚುಗಳನ್ನು ಅಮಾನತ್ತು ಪಡಿಸಿಕೊಂಡಿರುತ್ತೇವೆ. ಸದರಿ ಸಮಯದಲ್ಲಿ ಆರೋಪಿತನಿಗೆ ಸೇರಿದ ಕೆಎ.16-ಸಿ.7951 ಆಟೋವನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ. ಸಾಕ್ಷಿ ನೋಟಿಸಿನಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, 1(ಬಿ) ಮತ್ತು 7(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ಶೋಧನಾ ವಾರೆಂಟಿನಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, 2(ಸಿ) ಎಂದು, ಪಂಚನಾಮೆಯಲ್ಲಿನ ಸಹಿಯನ್ನು ನಿಪಿ-3(ಡಿ) ಎಂದು, ಮಾಲು ಪಟ್ಟಿಯಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-4(ಸಿ) ಎಂದು, ಮಾದರಿ ಮೊಹರಿನಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-5(ಸಿ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ-2 ರಲ್ಲಿ ಆರೋಪಿತನ ಸಹಿಯನ್ನು ನೋಡಿ ಗುರುತಿಸಿದ್ದು, ನಿಪಿ-2(ಡಿ) ಎಂದು ಗುರುತಿಸಲಾಯಿತು. ಸಾಕ್ಷಿ ಮುದ್ದೆ ಮಾಲು-1 ರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಮುದ್ದೆ ಮಾಲು-1(ಸಿ) ಎಂದು ಗುರುತಿಸಲಾಯಿತು. ಆರೋಪಿಗೆ ದಂಡ ಪ್ರಕ್ರಿಯಾ ಸಂಹಿತೆ ಕಲಂ 41 ರಡಿಯಲ್ಲಿ ನೋಟೀಸನ್ನು ನೀಡಿ ಬಿಟ್ಟಿರುತ್ತೇನೆ. ಅಮಾನತ್ತುಪಡಿಸಿಕೊಂಡ ಮಧ್ಯದ ಮಾಲಿನೊಂದಿಗೆ ಠಾಣೆಗೆ ಬಂದು ಸ್ವದೂರನ್ನು ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿರುತ್ತೇನೆ. ಸಾಕ್ಷಿ ಸ್ವದೂರನ್ನು ನೋಡಿ ಗುರುತಿಸಿದ್ದು, ನಿಪಿ-9 ಎಂದು, ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ನಿಪಿ-10 ಎಂದು, ಸಾಕ್ಷಿಯ ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿತನನ್ನು ಮತ್ತು ಮುದ್ದೆ ಮಾಲನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು : ಆರೋಪಿತರ ಪರ ಶ್ರೀ.ಕೆ.ಪಿ ವಕೀಲರಿಂದ**

3. ಮಹಜರಿನ ಸಾಕ್ಷಿದಾರರು ಕುಡಿನೀರುಕಟ್ಟೆ ಗ್ರಾಮದವರು. ಮಹಜರಿನ ಸಾಕ್ಷಿದಾರರಿಂದ ಸದರಿರವರ ವಿಳಾಸದ ಕುರಿತು ಯಾವುದೇ ದಾಖಲಾತಿಯನ್ನು ಪಡೆದುಕೊಂಡಿಲ್ಲ. ಸಾಮಾನ್ಯವಾಗಿ ಬಸ್ ನಿಲ್ದಾಣದಲ್ಲಿ ಸಾಕಷ್ಟು ಜನ ಇರುತ್ತಾರೆ ಎಂದರೆ ಸರಿ. ಶಿವಮೊಗ್ಗ ಚಿತ್ರದುರ್ಗ ರಸ್ತೆ ಎನ್.ಹೆಚ್-13 ರ ರಸ್ತೆ ಎಂದರೆ ಸರಿ. ನಾನು, ಚಾಸಾ-3 ಮತ್ತು 4 ರವರು ಆರೋಪಿತನಿಗೆ ಆಟೋ ನಿಲ್ಲಿಸಲು ಸೂಚನೆ ನೀಡಿದ್ದು, ಆರೋಪಿ ಆಟೋ

ದಿ: 05.02.2026

ನಿಲ್ಲಿಸದೇ ಹೋಗಿದ್ದು, ನಾನು ಮತ್ತು ಸಿಬ್ಬಂದಿಗಳು ಆರೋಪಿತನನ್ನು ಹಿಡಿದಿರುತ್ತೇವೆ. ನನ್ನ ಸಿಬ್ಬಂದಿಗಳು ಆರೋಪಿತನನ್ನು ಹಿಡಿದಿರುತ್ತಾರೆ. ಸದರಿ ಸ್ಥಳದಲ್ಲಿ ಪಶು ಆಸ್ಪತ್ರೆ ಇದ್ದು, ಸಾರ್ವಜನಿಕರು ಓಡಾಡುತ್ತಿರುತ್ತಾರೆ ಎಂದರೆ ಸರಿ. ಅಮಾನತ್ತುಪಡಿಸಿಕೊಂಡ ಮುದ್ದೆ ಮಾಲುಗಳ ಬ್ಯಾಚ್ ಸಂಖ್ಯೆಯನ್ನು ಉಲ್ಲೇಖ ಮಾಡಿಲ್ಲ. ಪಂಚನಾಮೆಯನ್ನು ನಾನೇ ಬರೆದಿರುತ್ತೇನೆ. ತನಿಖೆಗೆ ಪೂರಕವಾಗಿ ಸುಳ್ಳು ಪಂಚನಾಮೆಯನ್ನು ಬೆರದಿರುತ್ತೇನೆ ಎಂದರೆ ಸರಿಯಲ್ಲ. ನಾನೇ ದಾಳಿ ಮಾಡಿ, ನಾನೇ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತನಿಂದ ಯಾವುದೇ ಮಧ್ಯದ ಪೌಚುಗಳನ್ನು ಮತ್ತು ವಾಹನವನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಠಾಣಾ ಅಂಕೆ ಸಂಖ್ಯೆಯ ಸಲುವಾ ಸುಳ್ಳು ಪ್ರಕರಣದ ದಾಖಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

ಓ. ಹೇ. ಕೇ. ಸರಿಯಿದೆ.

ಪ್ರಭಾರ ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ.